ಅ) ಹಾಗಿಲ್ಲದಿದ್ದರೆ ಈ ಕುರಿತಂತೆ ಇರುವ ಅಡೆತಡೆಗಳೇನು? (ವಿವರ ನೀಡುವುದು)

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :—

ಅ) ಬಾಗಲಕೋಟೆ ಜಿಲ್ಲೆಯ ಐತಿಹಾಸಿಕ, ಸಾಂಸ್ಕೃತಿಕ ಸ್ಥಳಗಳಾದ ಐಹೊಳೆ, ಪಟ್ಟದಕಲ್ಲು, ಬಾದಾಮಿ ಗುಹೆಗಳು, ಕೂಡಲಸಂಗಮ ಇವುಗಳಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಉತ್ತರ ಕರ್ನಾಟಕ ಪ್ಯಾಕೇಜ್ ಟ್ರಿಪ್‌ನ ಹೆಸರಿನಡಿಯಲ್ಲಿ ಸುವಿಹಾರಿ ಬಸ್ಸುಗಳಲ್ಲಿ ಪ್ರವಾಸಿಗರನ್ನು ಬೆಂಗಳೂರಿನಿಂದ ಕೊಂಡೊಯ್ಯುವ ಕಾರ್ಯಕ್ರಮಗಳನ್ನು ಈಗಾಗಲೇ ಸುಗಮವಾಗಿ ನಡೆಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಬಾಗಲಕೋಟೆ ಜಿಲ್ಲೆಯಲ್ಲಿ ಐಟಿಐ ಶಿಕ್ಷಣ ಸಂಸ್ಥೆಗಳ ಪರೀಕ್ಷಾ ಕೇಂದ್ರಗಳು.

2258(3105) ಶ್ರೀ ಪೂಜಾರ್ ಪಿ.ಹೆಚ್ (ಬಾಗಲಕೋಟೆ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್, ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಯಾವ ಯಾವ ಐ.ಟಿ.ಐ. ಶಿಕ್ಷಣ ಸಂಸ್ಥೆಗಳಿವೆ; ಅವುಗಳಿಗೆ ಪರೀಕ್ಷಾ ಕೇಂದ್ರಗಳನ್ನು ನೀಡಲಾಗಿದೆಯೇ?

ಆ) ಪರೀಕ್ಷಾ ಕೇಂದ್ರಗಳನ್ನು ಪಡೆದಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಮಾನ್ಯತೆ ಪಡೆದವುಗಳೇ?

ಇ) ಬಾಗಲಕೋಟೆ ನಗರದ ಶ್ರೀಮಾನ್ ಮಧ್ವಾಚಾರ್ಯ ಐ.ಟಿ.ಐ ಸಂಸ್ಥೆಗೆ ಸರ್ಕಾರದಿಂದ ಮಾನ್ಯತೆ ಪಡೆದು ಅನುದಾನಿತ ಶಿಕ್ಷಣ ಸಂಸ್ಥೆಯಾಗಿರುವುದು ಸರ್ಕಾರದ ಗಮನದಲ್ಲಿದೆಯೇ?

ಈ) ಐ.ಟಿ.ಐ. ಪರೀಕ್ಷಾ ಕೇಂದ್ರವನ್ನು ಪಡೆಯಲು ಮೇಲ್ಕಂಡ ಸದರಿ ಸಂಸ್ಥೆಯು ಅನುಮತಿ ಕೇಳಿದ್ದರೂ ಸಹ ನೀಡದಿರುವುದಕ್ಕೆ ಕಾರಣವೇನು?

ಉ) ಪ್ರಸಕ್ತ ವರ್ಷ ಇದಕ್ಕೆ ಪರೀಕ್ಷಾ ಕೇಂದ್ರ ನೀಡಲಾಗುವುದೇ? (ವಿವರ ನೀಡುವುದು)

ಶ್ರೀ ಎ.ಎಮ್. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್, ಸಚಿವರು) :—

ಅ) ಬಾಗಲಕೋಟೆ ಜಿಲ್ಲೆಯಲ್ಲಿರುವ ಐ.ಟಿ.ಐ. ಶಿಕ್ಷಣ ಸಂಸ್ಥೆಗಳು ಕೆಳಕಂಡಂತಿವೆ.

1) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಬಾಗಲಕೋಟೆ.
2) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಗುಳೇದಗುಡ್ಡ.
3) ಜೆ.ಕೆ. ಕಂಪ್ಯೂಟರ್ ಅಕಾಡೆಮಿ, ನಿಡಗುಂದಿ.

4) ಎಸ್.ಸಿ. ಅಂತರಗೊಂಡ ಐ.ಟಿ.ಸಿ. ಬಾಗಲಕೋಟೆ
5) ಆರ್.ಆರ್. ಕಂಪ್ಯೂಟರ್ ಅಕಾಡೆಮಿ, ಬಾಗಲಕೋಟೆ
6) ಶ್ರೀ ಮಧ್ವಾಚಾರ್ಯ ಐ.ಟಿ.ಸಿ. ಬಾಗಲಕೋಟೆ
7) ಆಲ್ ಮಿ ಜಾನ್ ಐ.ಟಿ.ಸಿ. ಬಾಗಲಕೋಟೆ
8) ಅಂಜುಮಾನ್ ಐ.ಟಿ.ಸಿ. ಬಾಗಲಕೋಟೆ
9) ಆಲ್-ಅಮಿನ್ ಐ.ಟಿ.ಸಿ. ಕಲಗಡಗಿ
10) ಎಸ್.ಜೆ.ಬಿ.ಎಂ. ಐ.ಟಿ.ಸಿ. ಇಲಕಲ್, ಬಾಗಲಕೋಟೆ
11) ಹಜರತ್ ಎಸ್.ಎಸ್.ಎಂ. ಖಾದ್ರಿ ಐ.ಟಿ.ಸಿ. ಇಲಕಲ್
12) ಕಾಳಿದಾಸ ಐ.ಟಿ.ಸಿ. ಬಾದಾಮಿ, ಬಾಗಲಕೋಟೆ
13) ಸಿದ್ದಲಿಂಗೇಶ್ವರ ಐ.ಟಿ.ಸಿ. ಶಿರೂರು
14) ಶ್ರೀ ಬನಶಂಕರಿ ರೂರಲ್ ಐ.ಟಿ.ಸಿ. ಬನಶಂಕರಿ
15) ವಿಶ್ವೇಶ್ವರಯ್ಯ ಐ.ಟಿ.ಸಿ. ಹನುಮನಹಾಳ
16) ಶ್ರೀ ಎಂ.ವಿ.ಪಿ. ಐ.ಟಿ.ಸಿ. ತೇರದಾಳ
17) ಜೆ.ಎಸ್.ಎಸ್. ಐ.ಟಿ.ಸಿ. ಬನಹಟ್ಟಿ
18) ಒ.ಎಂ.ಪಿ.ಎಸ್. ಐ.ಟಿ.ಸಿ. ಚಿಮ್ಮಾಡ್
19) ಶ್ರೀ ಮುರುಗರಾಜೇಂದ್ರ ಐ.ಟಿ.ಸಿ. ಕೋಳಿಗುಡ್ಡ
20) ಜನತಾ ಸೇವಾ ಸಮಿತಿ ಐ.ಟಿ.ಸಿ. ಬನಹಟ್ಟಿ

ಇವುಗಳಲ್ಲಿ 06 ಸಂಸ್ಥೆಗಳಿಗೆ ಪರೀಕ್ಷಾ ಕೇಂದ್ರಗಳನ್ನು ನೀಡಲಾಗಿದೆ.

1) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬಾಗಲಕೋಟೆ
2) ಆಲ್ಮಿ ಜಾನ್ ಐ.ಟಿ.ಸಿ. ಬಾಗಲಕೋಟೆ
3) ಎಸ್.ಜೆ.ಬಿ.ಎಂ. ಐ.ಟಿ.ಸಿ. ಇಲಕಲ್, ಬಾಗಲಕೋಟೆ
4) ಕಾಳಿದಾಸ ಐ.ಟಿ.ಸಿ. ಬಾದಾಮಿ, ಬಾಗಲಕೋಟೆ
5) ಶ್ರೀ ಬನಶಂಕರಿ ರೂರಲ್ ಐ.ಟಿ.ಸಿ. ಬನಶಂಕರಿ
6) ಶ್ರೀ ಎಂ.ವಿ.ಪಿ. ಐ.ಟಿ.ಸಿ. ತೇರದಾಳ

ಆ) ಹೌದು

ಇ) ಗಮನದಲ್ಲಿದೆ

ಈ) ಪರೀಕ್ಷಾ ಕೇಂದ್ರಗಳನ್ನು ಕಡಿಮೆ ಮಾಡಬೇಕೆಂದು ಕೇಂದ್ರ ಸರ್ಕಾರದ ನಿರ್ದೇಶನವಿದೆ. ಆದುದರಿಂದ ಹೊಸದಾಗಿ ಯಾವ ಖಾಸಗಿ ಪರೀಕ್ಷಾ ಕೇಂದ್ರವನ್ನು ಜುಲೈ-2001ರ ಪರೀಕ್ಷೆ ಸಂಬಂಧವಾಗಿ ಗುರುತಿಸಿಲ್ಲ. ಅಲ್ಲದೆ ಬಾಗಲಕೋಟೆಯಲ್ಲಿ ಹೆಚ್ಚಾಗಿ ಪರೀಕ್ಷಾ ಕೇಂದ್ರವನ್ನು ಗುರುತಿಸುವ ಅವಶ್ಯಕತೆಯೂ ಕಂಡು ಬರಲಿಲ್ಲ.

ಬೇಲೂರು ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿ ರಸ್ತೆ.

2259(2689) ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೇಲೂರು ತಾಲ್ಲೂಕಿನಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಯಾವ ಯಾವ ರಸ್ತೆಕಾಲುದಾರಿ ಕೈಗೊಳ್ಳಲಾಗಿದೆ.

2. ಸಿ.ಆರ್.ಎಫ್. ಯೋಜನೆಯಡಿಯಲ್ಲಿ ಹಾಸನ ಜಿಲ್ಲೆಯಲ್ಲಿ ಯಾವ ಯಾವ ರಸ್ತೆ ತೆಗೆದುಕೊಳ್ಳಲಾಗಿದೆ (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1) ಲೋಕೋಪಯೋಗಿ ಇಲಾಖೆಯಡಿ ಆರ್ ಐಡಿಎಫ್-2 ರಿಂದ 6ರವರೆಗೆ ಒಟ್ಟು ಕೆಳಕಂಡ 7 ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಪ್ರಸ್ತುತ ಹಂತ
1.	ಬಿದರಹಳ್ಳಿ ನಾರ್ವೆ ಸುಳೆಗುಡ್ಡ ರಸ್ತೆ	97.00	ಪೂರ್ಣಗೊಂಡಿದೆ.
2.	ಅರಗೂರು ಸಂಕೇನಹಳ್ಳಿ ರಸ್ತೆ	40.00	ಪೂರ್ಣಗೊಂಡಿದೆ.
3.	ಹನಿಕೆ ಕುರಬರಬೂಡಿಹಾಳ್ ರಸ್ತೆ	61.00	ಪೂರ್ಣಗೊಂಡಿದೆ.
4.	ಬಿಬಿಎಂ ರಸ್ತೆಯಿಂದ ಕನ್ನಾಪುರ ಸೇರುವ ರಸ್ತೆ	26.00	ಪ್ರಗತಿಯಲ್ಲಿದೆ.
5.	ಎಲಗುಂಡ ಜಾವಗಲ್ ರಸ್ತೆ	45.00	ಪ್ರಗತಿಯಲ್ಲಿದೆ.
6.	ಸಿಎಂ ರಸ್ತೆಯಿಂದ ಮುತ್ತುಗನ್ನೆ ಮಾರ್ಗ ಹನಿಕೆ ಸೇರುವ ರಸ್ತೆ	33.00	ಗುತ್ತಿಗೆ ನೇಮಿಸಬೇಕಾಗಿದೆ
7.	ಕಂದಳಿ ಪಡವಳಲು ಬಿಕ್ಕೋಡು ರಸ್ತೆ	64.00	ಗುತ್ತಿಗೆ ನೇಮಿಸಬೇಕಾಗಿದೆ